ಭೌಗೋಳಿಕ ಪ್ರದೇಶಕ್ಕೆ ಸಂಬಂಧಪಟ್ಟ ಸಹಜ ನಡವಳಿಕೆಯೇನೋ ಎಂದು ಆಶ್ಚರ್ಯ ಪಟ್ಟಿದ್ದೇನೆ. ಯಾಕೆಂದರೆ ಸಾವೆಂದರೆ ಒಂದು ಘಟಿತವಷ್ಟೇ... ಅದರ ಬಗ್ಗೆ ಪ್ರಶ್ನೆ ಮಾಡಲೂ ಕೂಡ ಯಾರೂ "ಶುಗರ್ ಕೋಟ್" ಮಾಡುವುದಿಲ್ಲ.

ಚಿಕ್ಕಪ್ಪ ಹಾಗೂ ಅಯ್ಯ (ನಮಗೆ ಅಜ್ಜ, ಚಿಕ್ಕಪ್ಪನಿಗೆ ಮಾವ) ಅರ್ಥಾತ್ ಸದಾಶಿವಪ್ಪನವರು ಇಬ್ಬರೂ ಕ್ರಿಕೆಟ್ ಫ್ಯಾನ್ಸು. ಎಷ್ಟರ ಮಟ್ಟಿಗೆ ವಾಸ್ತವದಿಂದ ದೂರ ನಿಂತು ಜೀವನದ ಬೇರೆ ಬೇರೆ ಸಂಗತಿಗಳಲ್ಲಿ ಕಳೆದುಹೋಗುತ್ತಿದ್ದರು ಅನ್ನುವುದನ್ನು ನೆನೆಸಿಕೊಂಡರೆ "ಹೀಗೂ ಉಂಟೇ" ಅಂತ ಅನ್ನಿಸುತ್ತೆ.

ಅದೊಂದು ವರ್ಷ ಮನೆಯಲ್ಲಿ ಎಲ್ಲರಿಗಿಂತ ಹಿರಿಯರಾದ ಅಯ್ಯನಿಗೆ ಹುಷಾರಿಲ್ಲ ಅಂತ ಎಲ್ಲರೂ ಚಿಂತಿತರಾಗಿದ್ದೆವು. ಹೇಗೋ ಚೇತರಿಸಿಕೊಂಡುಬಿಟ್ಟರು. ಆಮೇಲೆ ತಗೋ ಇದ್ದವರಿಗೆಲ್ಲಾ ಕಾಟ. ಚಿಕ್ಕಪ್ಪನಿಗಂತೂ "ಕೂಡಲ ಸಂಗಮಕ್ಕೆ ಕರಕಂಡು ಹೋಗು..." ಅಂತ ಗಂಟು ಬಿದ್ದರು. ಚಿಕ್ಕಪ್ಪನೂ ಆರೋಗ್ಯದ ವಿಚಾರದಲ್ಲಿ ಅಷ್ಟಕಷ್ಟೆ. ಹಾಗಾಗಿ ತಾನು ಕಮಿಟ್ ಮಾಡಿಕೊಂಡು ಇವರನ್ನು ಎಲ್ಲಿಗೋ ಕರೆದುಕೊಂಡು ಹೋಗಿ ಅಲ್ಲೇನೋ ಸಮಸ್ಯೆ ಆದರೆ ಆಮೇಲೆ ಮನೆಯವರ ಹತ್ತಿರ ಜೀವಮಾನವೆಲ್ಲಾ ಉಗಿಸಿಕೋಬೇಕಾದೀತು ಅಂತ ಯೋಚಿಸಿ ಆವಾಗ ಈವಾಗ ಅಂತ ಪೋಸ್ಟ್ ಪೋನ್ ಮಾಡ್ತಾ ಮಾಡ್ತಾ ಕಾಲ ತೆಗೀತಿದ್ದರು.

"ಕರಕಂಡು ಹೋಗಬಾರದೇನ್ ಚಿಕಪ ಅತ್ಲಾಗಿ?"

"ಅಯ್ಯಯ್ಯೋ ಹಂಗನ್ನ ಬ್ಯಾಡವಾ! ಅಲ್ಲಿ ಹೋಗಿ ಸದಸಿವಣ್ಣಗ ಏನರೆ ಆತು ಅಂದ್ರ ಮನೀಗಿ ಬಿಟಗಣದಿಲ್ಲ ಯಾರೂ... ಆಮ್ಯಾಲ ಬರೀ ಉಗಿಸಿಗ್ಯಂತ ಇರಬೇಕಾಕತಿ..." ಅಂತ ನಗುತ್ತಿದ್ದರು.

ಎಲ್ಲರ ಗಮನ ಅಯ್ಯನ ಆರೋಗ್ಯದ ಮೇಲೆ ಕೇಂದ್ರೀಕೃತವಾಗಿದ್ದಾಗ ಇದ್ದಕ್ಕಿದಂತೆ ಚಿಕ್ಕಪ್ಪನಿಗೆ ಮೆದುಳಿಗೆ ಸಂಬಂಧಪಟ್ಟ ಸಮಸ್ಯೆ ಏನೋ ಆಗಿ ಆಸ್ಪತ್ರೆ ಸೇರಿದವರು ಕೋಮಾ ತಲುಪಿ ಹಾಗೇ ಹೋಗಿಯೂ ಬಿಟ್ಟರು. ಅಯ್ಯನಿಗೆ, ನಮ್ಮ ತಂದೆಗೆ ಎಲ್ಲರಿಗೂ ದಿಗ್ಭ್ರಾಂತಿ.

ಅವರಿಬ್ಬರೂ ಹೇಗೆ ಚೇತರಿಸಿಕೊಳ್ಳುತ್ತಾರೋ ಅಂತ ಎಲ್ಲರಿಗೂ ಆತಂಕ.

ಸ್ವಲ್ಪ ದಿನ ಕಳೆದು ಅಯ್ಯನ ಮನೆಗೆ ಹೋದೆ. ಒಬ್ಬರೇ ಟೀವಿ ಹಾಕಿಕೊಂಡು ತೂಕಡಿಸುತ್ತಿದ್ದರು. ಚಿಕ್ಕಪ್ಪ–ಅಯ್ಯ ಒಳ್ಳೆಯ ಪಾರ್ಟ್‌ನರ್‌ಶಿಪ್ಪಿನಲ್ಲಿ ನೋಡುತ್ತಿದ್ದ ವರ್ಲ್ಡ್ ಕಪ್ ಕ್ರಿಕೆಟ್ ನಡೆದಿತ್ತು...

ಈವತ್ತು ಅವರೊಬ್ಬರೇ ಕೂತಿದ್ದರು. ಉಳಿದವರೆಲ್ಲಾ ಮನೆಯ ಎಲ್ಲೆಲ್ಲೋ ಚದುರಿ ಹೋಗಿದ್ದರು... ಎಲ್ಲರೂ ಅವರವರ ಜಗತ್ತಿನಲ್ಲಿ ದುಃಖಿಗಳು.

"ಅಯ್ಯಾ..." ಎಂದು ಮೆಲ್ಲಗೆ ಕರೆದೆ.

"ಹಾ... ಹಾಂ!" ಎನ್ನುತ್ತಾ ಸುತ್ತ ನೋಡಿದರು... ಕಣ್ಣಲ್ಲಿ ನೀರು... ಚಿಕ್ಕಪ್ಪನನ್ನು ನೆನೆಸುತ್ತಿದ್ದರೇನೋ ಅಂತ ಪಿಚ್ಚೆನಿಸಿತು.

"ಸ್ವಲ್ಪ ಸೌಂಡು ಜಾಸ್ತಿ ಮಾಡು... ಎಷ್ಟು ಓವರ್ ಆದ್ವು..." ಅಂತ ಕ್ರಿಕೆಟ್ ನಿರಕ್ಷರಿಯಾದ ನನ್ನನ್ನು ಕೇಳಿದರು. ಸುಮ್ಮನೆ ಪೆಚ್ಚು ಪೆಚ್ಚಾಗಿ ನಕ್ಕೆ.

"ಗೊತ್ತಿಲ್ಲಪ..." ಎನ್ನುತ್ತಾ ಸೌಂಡು ಜಾಸ್ತಿ ಮಾಡಿದೆ.

"ಮೌಳಿ...." ಅಂತ ಮಾತು ತೆಗೆದರು... ನಾನು ಅವರ ಮುಖವನ್ನೇ ನೋಡಿದೆ.

"ಥೋ! ಅನ್ ಲಕಿ ಫೆಲೋ... ಸ್ವಲ್ಪ ದಿನ ಇರಬೇಕಾಗಿತ್ತು... ವರ್ಲ್ಡ್ ಕಪ್ ಮಿಸ್ ಮಾಡಿಕ್ಯಂಡ..." ಎಂದುಬಿಟ್ಟರು. ನಾನು ಸುಮ್ಮನೆ ಜಾಗ ಖಾಲಿ ಮಾಡಿದೆ. ದುಃಖವನ್ನು ಹೀಗೇ ಅನುಭವಿಸಬೇಕು ಅಂತ ಏನಾದರೂ ರೂಲ್ಸು ಇದೆಯಾ?

ಅಕ್ಕ ಸತ್ತಾಗಲೂ ಅಷ್ಟೇ. ಅವಳ ಎಳೇ ಮಗಳಿಗಾಗಿ ಎಲ್ಲರೂ ಮಮ್ಮಲ ಮರುಗುತ್ತಿದ್ದರೆ ಕಿವಿ ಸ್ವಲ್ಪ